ಆ) ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಮನೆಗಳನ್ನು ರಚಿಸಲಾಗುವುದು ?

ಶ್ರೀ ದೊಹಮ್ಮದ್ ಮೊಯಿನುದ್ದೀನ್ (ವಸತಿ ರಾಜ್ಯ ಸಚಿವರು).—

ಅ) ೧೯೮೭–೮೮ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ೨,೭೪೧ ಜನತಾ ಮನೆಗಳನ್ನು ಹಾಗೂ ೧,೫೯೫ ಪ್ರಾಯೋಗಿಕ ಕಡಿಮೆ ವೆಚ್ಚದ ಮನೆಗಳನ್ನು ಮಂಜೂರು ಮಾಡಲು ಉದ್ದೇಶಿಸಲಾಗಿದೆ.

ಆ) ತಾಲ್ಲೂಕುವಾರು ಮಂಜೂರಾತಿಯನ್ನು ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರು ಕೊಡುತ್ತಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿಗೆ ನೆರವು

೪೫೧. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಹಬಾಳ್ವೆ ಪ್ರಗತಿಶೀಲ, ಬೆಳವಣಿಗೆಗಾಗಿ ರೂಪಿತವಾಗಿದ್ದು ಅದಕ್ಕಾಗಿ ಸರ್ಕಾರದವರು ಯಾವ ರೀತಿ ಪ್ರೋತ್ಸಾಹ ನೀಡುತ್ತಿದ್ದಾರೆ ?

ಆ) ಅದಕ್ಕಾಗಿ ಶ್ರಮಿಸುತ್ತಿರುವ ಅಧ್ಯಾಪಕರುಗಳಿಗೆ ಗೌರವಧನ ಹೆಚ್ಚಿಸಲು ಸರ್ಕಾರದವರು ಕೈಗೊಂಡ ಸೂಕ್ತ ಕ್ರಮವೇನು?

ಶ್ರೀ ಬಿ. ಎಲ್. ಶಂಕರ್ (ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).—

ಅ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗಳಿಗೆ ಇವರು ನಡೆಸುವ ಸೇವಾ ಶಿಬಿರಗಳು, ಜಾಂಬೂರಿ ಮತ್ತು ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ ಸರ್ಕಾರದಿಂದ ಧನಸಹಾಯವನ್ನು ಮಂಜೂರು ಮಾಡಲಾಗುವುದು.

ಆ) ಇಡಿ ಇಬಿ ೭೦ ದಿನಾಂಕ ೧೫–೧೦–೧೯೭೧ರ ಸರ್ಕಾರಿ ಆದೇಶದ ಪ್ರಕಾರ ಸ್ಕೌಟ್ಸ್ ಮತ್ತು ಗೈಡ್ಸ್ ಅಧ್ಯಾಪಕರಿಗೆ ಗೌರವಧನ ಕೊಡುವ ಸಲುವಾಗಿ ರೂ. ೨.೪೦ ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಸಂಸ್ಥೆಯು ಅವರಿಗೆ ವಾರ್ಷಿಕ ರೂ. ೨೪೦.೦೦ಗಳ ಗೌರವಧನವನ್ನು ತಿಂಗಳಿಗೆ ರೂ. ೨೦–೦೦ ಗಳಂತೆ ಕೊಡುತ್ತಿದೆ. ಈ ಗೌರವಧನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ರಾಜ್ಯದಲ್ಲಿ ಕಾರ್ಪೊರೇಷನ್ ಬಿಡುಗಡೆಯ ಬಗ್ಗೆ

೭೭೭. ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿಯ ಪ್ರತಿ ಕಾರ್ಪೊರೇಷನ್‌ಗಳಿಗೆ ೪ ವರ್ಷಗಳಿಂದ ಬಿಡುಗಡೆಯಾಗಿರುವ ಹಣವೆಷ್ಟು?

ಆ) ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್‌ಗೆ ಕಳೆದ ಮೂರು ವರ್ಷಗಳಿಂದ ನೀಡಿದ ಹಣದ ಮೊತ್ತ ಎಷ್ಟು ಹಾಗೂ ಯಾವ ಯಾವ ಬಾಬ್ತುಗಳಿಗಾಗಿ ನೀಡಲಾಗಿದ್ದಿತು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಈ ವಿವರಣೆಯನ್ನು ಲಗತ್ತಿಸಲಾದ ಅನುಬಂಧದಲ್ಲಿ ತೋರಿಸಲಾಗಿದೆ.

ಆ) ರೂ. ೪,೪೫,೨೫,೯೫೫ (ನಾಲ್ಕು ಕೋಟಿ ನಲವತ್ತೈದು ಲಕ್ಷದ ಎಪ್ಪತ್ತೈದು ಸಾವಿರದ ಒಂಭೈನೂರಾ ತೊಂಭತ್ತೈದು ರೂಪಾಯಿಂಗಳು ಮಾತ್ರ.